7. ಲಿಖಿತ ಪರೀಕ್ಷೆ: ಅರ್ಹ ಅಭ್ಯರ್ಥಿಗಳಿಗೆ 150 ಅಂಕಗಳಿಗೆ ವಸ್ತುನಿಷ್ಠ ಮಾದರಿಯ ಎರಡು ಪತ್ರಿಕೆಗಳನ್ನೊಳಗೊಂಡ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದು.

ಎ) ಪತ್ರಿಕೆ-1: ಸಾಮಾನ್ಯ ಪತ್ರಿಕೆ- ಸಾಮಾನ್ಯ ಅಧ್ಯಯನ, ಸಾಮಾನ್ಯ ವಿಜ್ಞಾನ ಮತ್ತು ವಿಧಿ ವಿಜ್ಞಾನ ಪ್ರಯೋಗಾಲಯಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಾಧಾರಿತ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ-75 ಅಂಕಗಳು [ಸಮಯ: 01 ಗಂಟೆ 30 ನಿಮಿಷಗಳು]

ಬಿ) ಪತ್ರಿಕೆ-2: ನಿರ್ದಿಷ್ಟ ಪತ್ರಿಕೆ- ವಿಷಯಾಧಾರಿತ ಪ್ರಶ್ನೆ ಪತ್ರಿಕೆಯಾಗಿದ್ದು, ಆಯಾ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ -75 ಅಂಕಗಳು [ಸಮಯ: 01 ಗಂಟೆ 30 ನಿಮಿಷಗಳು]

ಸಿ) ಯಾವುದೇ ರೀತಿಯ ಋಣಾತ್ಮಕ ಅಂಕಗಳು ಇರುವುದಿಲ್ಲ.

8. ಪಠ್ಯಕ್ರಮ: ಪ್ರತಿ ಹುದ್ದೆಗೆ ನಿಗದಿಪಡಿಸಲಾಗಿರುವ ವಿದ್ಯಾರ್ಹತೆಯನುಸಾರ ಪಠ್ಯಕ್ರಮವನ್ನು ತಯಾರಿಸಿ, ಇಲಾಖೆಯ ಅಧಿಕೃತ ವೆಬ್‌ಸೈಟ್ www.ksp.gov.in ನಲ್ಲಿ ಪ್ರಕಟಿಸಲಾಗುವುದು.

9. ಆಯ್ಕೆ ವಿಧಾನ:

ಎ) ಸದರಿ ಅಧಿಸೂಚನೆಯಲ್ಲಿ ನಮೂದಿಸಿದ ಖಾಲಿ ಹುದ್ದೆಗಳ ವರ್ಗೀಕರಣವು ಈಗಾಗಲೇ ಜಾರಿಯಲ್ಲಿರುವ ಸೇವಾ ನಿಯಮಾವಳಿಗಳು ಹಾಗೂ ಅಧಿಸೂಚನೆ ನಿಯಮಗಳನ್ನೊಳಗೊಂಡಿರುತ್ತದೆ ಹಾಗೂ ನ್ಯಾಯಾಲಯದ ತೀರ್ಪುಗಳ ಹಾಗೂ ಸರ್ಕಾರದ ಅಧಿಸೂಚನೆಗಳ ಮೇರೆಗೆ ಬದಲಾವಣೆಗೆ ಒಳಪಟ್ಟಿರುತ್ತದೆ.

ಬಿ) ಆಯ್ಕೆ ಸಮಿತಿಯು ಸ್ವೀಕರಿಸಲಾಗುವ ಅರ್ಜಿಗಳನ್ನು ಪರಿಶೀಲಿಸಿದ ನಂತರ ಅಭ್ಯರ್ಥಿಗಳು ನೀಡಲಾಗಿರುವ ವಿವರ ಮತ್ತು ಕೋರಲಾಗಿರುವ ಮೀಸಲಾತಿಗಳು ಸರಿಯಿದೆ ಎಂದು ಖಾತ್ರಿ ಪಡಿಸಿದ ಮೇಲೆ ಅಧಿಸೂಚನೆಯಲ್ಲಿ ಪ್ರಕಟಿಸಿದಂತೆ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮತ್ತು ಹಾಲಿ ಚಾಲ್ತಿಯಲ್ಲಿರುವ ನಿಯಮ ಆದೇಶಗಳನ್ವಯ, ಮೀಸಲಾತಿಗಳನುಸಾರ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಇಬ್ಬರು ಅಥವಾ ಹೆಚ್ಚು ಅಭ್ಯರ್ಥಿಗಳು ಗಳಿಸಿದ ಅಂಕಗಳು ಒಂದೇ ಆಗಿದ್ದಲ್ಲಿ ಅಂತಹ ಸಂದರ್ಭದಲ್ಲಿ ವಯಸ್ಸಿನ ಆಧಾರದ ಮೇಲೆ ಅಂದರೆ ವಯಸ್ಸಿನಲ್ಲಿ ಹಿರಿಯರಾದವರು ಕಿರಿಯರಿಗಿಂತ ಶ್ರೇಣಿಯಲ್ಲಿ ಮೇಲಿರುತ್ತಾರೆ.

ಸಿ) ಅಭ್ಯರ್ಥಿಗಳು ಎಲ್ಲಾ ವಿಧದಿಂದ ಅರ್ಹತೆ ಹೊಂದಿದ್ದಲ್ಲಿ ಮಾತ್ರ ಆಯ್ಕೆಗೆ ಪರಿಗಣಿಸಲಾಗುವುದು.

ಡಿ) ಹೊರ ರಾಜ್ಯದ ಅಭ್ಯರ್ಥಿಗಳು ಕರ್ನಾಟಕ ಸಿವಿಲ್ ಸೇವೆಗಳು (ನೇಮಕಾತಿ) (ಕನ್ನಡ ಭಾಷಾ ಪರೀಕ್ಷೆ) ನಿಯಮಗಳು, 1984ರ 2ನೇ ನಿಯಮದ ಪ್ರಕಾರ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ಹೊರತು ನೇಮಕ ಹೊಂದಲು ಅರ್ಹರಾಗುವುದಿಲ್ಲ.

10. ಖಾಯಂಪೂರ್ವ ಅವಧಿ ಮತ್ತು ವೇತನ ಶ್ರೇಣಿ :

ಎ) ಖಾಯಂಪೂರ್ವ ಅವಧಿ: ಎರಡು ವರ್ಷ

ಬಿ) ವೇತನ ಶ್ರೇಣಿ:

₹.21600-600-24600-700-28800-800-33600-900-39000-1050-40050.

ಸಿ) ಪಿಂಚಣಿ ಸೌಲಭ್ಯ: ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ:31.03.2006ರಂತೆ. ನೂತನ ಅಂಶದಾಯಿ ಪಿಂಚಣಿ ಸೌಲಭ್ಯ ಅನ್ವಯವಾಗುವುದು.